ರಾಯಚೂರು ಜಿಲ್ಲೆಯಲ್ಲಿ ಜಲಾನಯನ ಅಭಿವೃದ್ಧಿಗಾಗಿ ಅನುದಾನ

632 (5414) : ಶ್ರೀ ಸೈಯದ್ ಯಾಸೀನ್ (ರಾಯಚೂರು) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಯಚೂರು ತಾಲ್ಲೂಕು ಹಿಂದುಳಿದ ಹಾಗೂ ಗಡಿ ಪ್ರದೇಶವಾಗಿದ್ದು, ಈ ಭಾಗಕ್ಕೆ ಜಲಾನಯನ ಅಭಿವೃದ್ಧಿ ಸಲುವಾಗಿ ಹೆಚ್ಚಿನ ಅನುದಾನದ ಬಿಡುಗಡೆ ಮಾಡಲಾಗಿದೆಯೇ;

ಆ) ಇಲ್ಲದಿದ್ದಲ್ಲಿ ಯಾವಾಗ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು?

ಶ್ರೀ ವಿ.ಎಸ್.ಕೌಜಲಗಿ (ಕೃಷಿ ಸಚಿವರು):

ಅ) ಇಲ್ಲ

ಆ) ಹೆಚ್ಚುವರಿ ಅನುದಾನದ ಬಿಡುಗಡೆ ಬಗ್ಗೆ ಕೋರಿಕೆ ಬಂದಲ್ಲಿ ಅನುದಾನದ ಲಭ್ಯತೆ ಆಧಾರದ ಮೇಲೆ ಅದನ್ನು ಪರಿಶೀಲಿಸಲಾಗುವುದು.

ರಾಜ್ಯದಲ್ಲಿರುವ ಸಹಕಾರಿ ಎಣ್ಣೆ ಗಿರಣಿಗಳು

633 (5204) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಹಕಾರಿ ಎಣ್ಣೆಗಿರಣಿಗಳು ಎಷ್ಟು; ಅವು ಯಾವುದು;

ಆ) ಕಳೆದ 3 ವರ್ಷಗಳಿಂದ ಅವುಗಳು ಗಳಿಸಿದ ಲಾಭ ಹಾಗೂ ನಷ್ಟ ಎಷ್ಟು; (ಗಿರಣಿವಾರುವಿವರ ನೀಡುವುದು.

ಇ) ದಿನಾಂಕ: 31.3.2003ಕ್ಕೆ ನಷ್ಟಕ್ಕೊಳಗಾದ ಗಿರಣಿಗಳು ಯಾವುವು; ಹಾಗೂ ಅವುಗಳ ಒಟ್ಟು ಹಾನಿ ಎಷ್ಟು

ಈ) ಗಿರಣಿವಾರು ಆಡಳಿತ ಮಂಡಳಿ ಸದಸ್ಯರಯ ಯಾರು ಯಾರು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು):

ಅ) ರಾಜ್ಯದಲ್ಲಿ 6 ಸಹಕಾರಿ ಎಣ್ಣೆ ಗಿರಣಿಗಳು ಇರುತ್ತವೆ. ವಿವರ ಈ ಕೆಳಗಿನಂತೆ ಇದೆ:-

1. ಕರ್ನಾಟಕ ಸಹಕಾರಿ ಎಣ್ಣೆಬೀಜ ಬೆಳೆಗಾರರ ಮಹಾಮಂಡಳ (ನಿ) ದಾವಣಗೆರೆ ಘಟಕ, ದಾವಣಗೆರೆ.

2. ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘಗಳ ಒಕ್ಕೂಟ (ನಿ), ರಾಯಚೂರು.

3. ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘಗಳ ಒಕ್ಕೂಟ (ನಿ), ಹೊಸಪೇಟೆ, ಬಳ್ಳಾರಿ ಜಿಲ್ಲೆ.

4. ಫಾರ್ಮರ್ಸ್ ಕೋ-ಆಪರೇಟಿವ್ ಎಣ್ಣೆಗಿರಣಿನಿ, ಬಿಂಕದಕಟ್ಟೆ, ಗದಗ ಜಿಲ್ಲೆ,

5. ಗದಗ ಕೋ-ಆಪರೇಟಿವ್ ಎಣ್ಣೆ ಗಿರಣಿ (ನಿ), ಗದಗ.

6. ಮಲಪ್ರಭಾ ಕೋ-ಆಪರೇಟಿವ್ ಎಣ್ಣೆ ಗಿರಣಿ (ನಿ), ನರಗುಂದ, ಗದಗ ಜಿಲ್ಲೆ.

ಆ) ಕಳೆದ ಮೂರು ವರ್ಷಗಳಿಂದ ಅವುಗಳು ಗಳಿಸಿದ ಲಾಭ- ನಷ್ಟದ ವಿವರಗಳು ಈ ಕೆಳಗಿನಂತೆ ಇದೆ.